18-12-24
61-0-154

**ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀಮತಿ ಉಮಾಶ್ರೀ ರವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ಪ್ರಶ್ನೆಗೆ ಉತ್ತರ.**

**ವಿಷಯ**:-

ಪೌರಕಾರ್ಮಿಕರುಗಳ ವೇತನವನ್ನು ಎಸ್‌ಎಫ್‌ಸಿ ಮುಕ್ತನಿಧಿಯಿಂದ ವೇತನವನ್ನು ಪಾವತಿಸುವ ಬಗ್ಗೆ.

*****

**ಉತ್ತರ**:-

ರಾಜ್ಯದ ಎಲ್ಲಾ ಮಹಾನಗರಪಾಲಿಕೆ / ನಗರ ಸ್ಥಳೀಯ ಸಂಸ್ಥೆಗಳಲ್ಲಿ ಒಟ್ಟು ಮೂರು ವಿಧಧ ಪೌರಕಾರ್ಮಿಗಳು ಕಾರ್ಯನಿರ್ವಹಿಸುತ್ತಿರುತ್ತಾರೆ.

1. **ಖಾಯಂ ಪೌರಕಾರ್ಮಿಕರುಗಳು**: ಈ ಪೌರಕಾರ್ಮಿಕರುಗಳಿಗೆ ವೇತನವನ್ನು ಎಸ್ ಎಫ್‌ಸಿ ಮಾರ್ಗಸೂಚಿಯನ್ವಯ ಎಸ್‌ಎಫ್‌ಸಿ ಪ್ರವೇಶ ತೆರಿಗೆ ಅವತರಣದ ಘಟಕವಾದ ವೇತನ ಅನುದಾನದಡಿಯಲ್ಲಿ ಪಾವತಿಸಲಾಗುತ್ತಿದೆ.

2. **ಪೌರಕಾರ್ಮಿಕರ ವಿಶೇಷ ನೇಮಕಾತಿ** ನಿಯಮಗಳು-2022 ಈ ನಿಯಮದಡಿಯಲ್ಲಿ ನೇಮಕಾತಿ ಹೊಂದಿರುವ ಪೌರಕಾರ್ಮಿಕರುಗಳು ಖಾಯಂ ಪೌರಕಾರ್ಮಿಕರುಗಳಾಗಿದ್ದು, ಸರ್ಕಾರದ ಪತ್ರ ಸಂಖ್ಯೆ:ನಅಇ 128 ಎಸ್‌ಎಫ್‌ಸಿ 2023, ದಿನಾಂಕ:18-01-2024 ರಲ್ಲಿ 2024-25 ನೇ ಸಾಲಿನವರೆಗೂ ಭಾಗಶಃ ವೇತನವನ್ನು ಎಸ್ ಎಫ್‌ಸಿ ಮುಕ್ತ ನಿಧಿಯಿಂದ, ಭಾಗಶಃ ವೇತನವನ್ನು ಮಹಾನಗರಪಾಲಿಕೆ / ನಗರ ಸ್ಥಳೀಯ ಸಂಸ್ಥೆಗಳ ಸ್ವಂತ ನಿಧಿಯಿಂದ ಪಾವತಿಸಲಾಗಿರುತ್ತದೆ ಹಾಗೂ 2025-26ನೇ ಸಾಲಿನ ವೇತನವನ್ನು 2025-26ನೇ ಸಾಲಿನ ಆಯವ್ಯಯದನ್ವಯ ಎಸ್‌ಎಫ್‌ಸಿ ಪ್ರವೇಶ ತೆರಿಗೆ ಅವತರಣದ ಘಟಕವಾದ ಪೂರಕ ವೆಚ್ಚದಡಿಯಲ್ಲಿ ಪಾವತಿಸಲಾಗುತ್ತಿದೆ.

3. **ನೇರಪಾವತಿ ಪೌರಕಾರ್ಮಿಕರುಗಳು**: ಈ ಪೌರಕಾರ್ಮಿಕರುಗಳು ನೇರಪಾವತಿ ಯೋಜನೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಈ ಪೌರಕಾರ್ಮಿಕರುಗಳು ಸಂಭಾವನೆಯನ್ನು 2024-25ನೇ ಸಾಲಿನವರೆಗೂ ಎಸ್‌ಎಫ್‌ಸಿ ಮುಕ್ತನಿಧಿಯಿಂದ ಪಾವತಿಸಲಾಗಿರುತ್ತದೆ. 2025-26ನೇ ಸಾಲಿನ ಸಂಭಾವನೆಯನ್ನು 2025-26ನೇ ಸಾಲಿನ ಆಯವ್ಯಯದನ್ವಯ ಎಸ್‌ಎಫ್‌ಸಿ ಪ್ರವೇಶ ತೆರಿಗೆ ಅವತರಣದ ಘಟಕವಾದ ಪೂರಕ ವೆಚ್ಚದಡಿಯಲ್ಲಿ ಪಾವತಿಸಲಾಗುತ್ತಿದೆ.

ಸಂಖ್ಯೆ:ನಅಇ 58 ಎಸ್‌ಎಫ್‌ಸಿ 2025

**(ರಹೀಂ ಖಾನ್)**
ಪೌರಾಡಳಿತ ಹಾಗೂ ಹಜ್ ಸಚಿವರು